INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -5, January-February, 2022,
PageNo,69-70
Peer Reviewed Journal, Referred Journal

# ಆಧುನಿಕ ಭಾರತದ ಅಗ್ರಮಾನ್ಯರು – ಡಾ.ಬಿ.ಆರ್.ಅಂಬೇಡ್ಕರ್

**ಡಾ.ಎಂ.ರಾಚಪ್ಪಾಜಿ.**[1]

ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು 20ನೇ ಶತಮಾನದ ಜಾಗತಿಕ ಸಂದರ್ಭದ ಅದ್ವೀತಿಯ ಹೋರಾಟಗಾರರು ಮತ್ತು ವಿಮೋಚಕರಲ್ಲಿ ಅಗ್ರಮಾನ್ಯರು. ಜಗತ್ತಿನ ಶ್ರೇಷ್ಠ ಪಂಕ್ತಿಗೆ ಸೇರಿದ ಅದೇಷ್ಟೋ ಮೇಧಾವಿಗಳಲ್ಲಿ ಪ್ರಮುಖರಾಗಿ ತಮ್ಮ ನಡೆ–ನುಡಿ, ಬರೆಹಗಳು ಮತ್ತು ಭಾಷಣಗಳಿಂದ ಇಂದಿಗೂ ಅಂಬೇಡ್ಕರ್ ಅವರೇ ಪ್ರಖ್ಯಾತರಾಗಿದ್ದಾರೆ. ಮತ್ತೇ ಅಂಬೇಡ್ಕರ್ ಅವರು ಒಬ್ಬ ಅಪರೂಪದ ಕ್ರಾಂತಿಕಾರಕ ವ್ಯಕ್ತಿತ್ವದವರು. ಅಂಬೇಡ್ಕರ್ ಅವರು ಬಂಡಾಯದ, ವಿಮೋಚನೆಯ ಮತ್ತು ಪರಿವರ್ತನೆಯ ಜನಜಾಗೃತಿಯ ಸಂಕೇತವಾಗಿದ್ದರು. ಅಂದು ಡಾ. ಅಂಬೇಡ್ಕರ್ ಅವರು ವಿಶ್ವದ ಎರಡು ಬಲಿಷ್ಠ ದಮನಕಾರಿ ಶಕ್ತಿಗಳ ವಿರುದ್ಧ ಬಡಿದು ಎಬ್ಬಿಸಿದಂಥ ಬಂಡಾಯದ ಕೂಗು ಇಂದು ಪ್ರತಿಯೊಬ್ಬ ಶೋಷಿತ ಜನಸಮುದಾಯದಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಧ್ವನಿಸುತ್ತಿದೆ. ಅಂಬೇಡ್ಕರ್ ಅವರು ಮಹಾಪರಿನಿಬ್ಬಾಣಗೊಂಡು ಸರಿಸುಮಾರು ಆರು ದಶಕಗಳು ಉರುಳಿ ಹೋಗಿದ್ದರೂ ಸಮಷ್ಠಿ ದಮನಿತ ಜನವರ್ಗದವರು ಅವರನ್ನು ಇಂದಿಗೂ ಮರೆತಿಲ್ಲ. ಅಂಬೇಡ್ಕರ್ ಅವರ ಜ್ಞಾನದರ್ಶನದ ವಿಚಾರಗಳು ಒಂದಿಲ್ಲ ಒಂದು ವೇದಿಕೆಯ ಮುಖಾಂತರ ದಿನಂಪತ್ರಿ ಚರ್ಚೆಯಾಗುತ್ತಲೇ ಇವೆ. ಅವರ ಹೆಸರಿನಲ್ಲಿ ಲಕ್ಷಗಟ್ಟಲೇ ಸಂಘ ಸಂಸ್ಥೆಗಳು ಹುಟ್ಟುತ್ತಲೇ ಇವೆ. ಜ್ಞಾನದ ಮತ್ತು ಉನ್ನತ ಶಿಕ್ಷಣ ತಾಣಗಳೇ ಆಗಿರುವಂಥ ವಿಶ್ವವಿದ್ಯಾನಿಲಯಗಳಲ್ಲಿ ಅಂಬೇಡ್ಕರ್ ಅವರ ಅಧ್ಯಯನ ಕೇಂದ್ರಗಳು, ಅವರ ಕುರಿತು ಸಂಶೋಧನೆಗಳು, ಕಾರ್ಯಯೋಜನೆಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ಸಂವಾದಗಳು, ಮುಕ್ತ ಚರ್ಚೆಗಳು, ಪ್ರಬಂಧಗಳ ರಚನೆ, ವಿಶೇಷ ಉಪನ್ಯಾಸಗಳು ತಡೆಯಿಲ್ಲದೇ ಹೆಚ್ಚು ಹೆಚ್ಚು ನಡೆಯುತ್ತಲೇ ಇರುವುದನ್ನು ಗುರುತಿಸಬಹುದು. **65 ವರ್ಷಗಳು, 07 ತಿಂಗಳು, 22 ದಿನಗಳು** ಬದುಕಿದ್ದ ಜೀವಂತ ಅಂಬೇಡ್ಕರ್ ಅವರಿಗಿಂತ, ಮಾನಸಿಕ ಅಂಬೇಡ್ಕರ್ ಅವರು ಜಗತ್ತನ್ನೇ ಹೆಚ್ಚು ಹೆಚ್ಚು ಪ್ರಖರವಾಗಿಯೇ ವ್ಯಾಪಿಸುತ್ತಿದ್ದಾರೆ. ಅಂದೂ ಸಮಾಜದಲ್ಲಿ ಪಂಚಮ ಅಸ್ಪೃಶ್ಯವೆನಿಸಿಕೊಂಡ ಮಹಾರ್ ಜನವರ್ಗದಲ್ಲಿ ಜನ್ಮ ತಾಳಿದ ಅಂಬೇಡ್ಕರ್ ಅವರು ಶತಮಾನಗಳಾಚೆಯಿಂದ ಹುಟ್ಟಿ ಬೆಳೆದುಕೊಂಡು ಬಂದಿದ್ದಂಥ ನೂರಾರು ನೀತಿ ನಿರ್ಬಂಧಗಳಿಂದ ರೂಪಿತವಾಗಿದ್ದ ಕಷ್ಟಗಳನ್ನು, ಅವಮಾನಗಳನ್ನು ಸಹಿಸಿಕೊಂಡು, ಯಾವ ಅನುಕೂಲ ಅವಕಾಶಗಳಿಲ್ಲದಿದ್ದರೂ ತಮ್ಮ ಸ್ವ–ಅಖಂಡವಾದ

1.ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ಪರಿಶ್ರಮದಿಂದಲೇ ಈ ಶತಮಾನದ ಒಬ್ಬ ಶ್ರೇಷ್ಠ ಮೇಧಾವಿಯೆಂದು, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿಯ ಒಬ್ಬ ಅಸಾಮಾನ್ಯ ವಿಚಾರವಾದಿಯೆಂದು ಲೋಕ ವಿಖ್ಯಾತಿಯಾದರು.

ಅಂಬೇಡ್ಕರ್ ಅವರ ಸಂಪೂರ್ಣ ಜೀವನ ಸಿದ್ಧಿಯೂ ಈ ಶತಮಾನದಲ್ಲಿ ನಡೆದ ಒಂದು ಅದ್ವೀತಿಯ ವಿಮೋಚನಾ ಧ್ವನಿಯಾಗಿದೆ. ಖ್ಯಾತ ಲೇಖಕಿ ಗೇಲ್ ಅಮ್‌ವೆಡ್ಟ್ ಅವರ ಮಾತುಗಳಲ್ಲಿಯೇ ಹೇಳುವುದಾದರೆ; ಭಾರತದ ಉದ್ದಗಲಕ್ಕೂ ಅನೇಕ ಚಾರಿತ್ರಿಕ ಪುರುಷರ ಪುತ್ಥಳಿ ಮತ್ತು ಪ್ರತಿಮೆಗಳು ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿವೆ. ಆದರೆ ಯಾವೊಬ್ಬ ಐತಿಹಾಸಿಕ ವ್ಯಕ್ತಿಯ ಪ್ರತಿಮೆಗಳು ಸಂಖ್ಯೆಯಲ್ಲಿ ಡಾ.ಭೀಮರಾವ್ ರಾಮ್‌ಜೀ ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ಸರಿಗಟ್ಟುವದಿಲ್ಲವೆಂಬುದು ನಿಸ್ಸಂಶಯ. ಕನ್ಯಾಕುಮಾರಿಯಿಂದ ಹಿಡಿದು ಹಿಮಾಲಯದವರೆಗೆ ವ್ಯಾಪಿಸಿರುವ ದೇಶದ ಪ್ರತಿಯೊಂದು ಊರುಗಳಲ್ಲಿಯೂ ಅಂಬೇಡ್ಕರ್ ಅವರ ಪುತ್ಥಳಿಗಳು ರಾರಾಜಿಸುತ್ತಿರುವುದನ್ನು ಗುರುತಿಬಹುದು. ರಸ್ತೆಗಳು ಸಂಗಮಿಸುವ ಸ್ಥಳಗಳಲ್ಲಿ, ನಗರ ಪಟ್ಟಣಗಳಲ್ಲಿಯ ದಮನಿತರು ವಾಸಿಸುವ ಪ್ರದೇಶಗಳಲ್ಲಿ ಶೈಕ್ಷಣಿಕ ಮತ್ತು ಸರ್ಕಾರಿ ಸಂಸ್ಥೆಗಳ ಮುಂಭಾಗಗಳಲ್ಲಿ ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಗಳನ್ನು ಪ್ರತಿಷ್ಠಾಪಿಸಲಾಗಿರುವುದನ್ನು ಕಾಣುತ್ತೇವೆ. ಹಾಗೇ ಒಂದೂ ಬಾರಿ ಈ ಭಾರತೀಯ ಭೂಮಿಯನ್ನು ಸುತ್ತುವರೆದು ನೋಡಿದರೆ; ಬಾಬಾಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆ ಇಲ್ಲದ ಒಂದೇ ಒಂದು ಊರು ಸಹ ಇಲ್ಲವೆಂದು ಭಾಷಾವಾಗುತ್ತದೆ. ಇದು ಏಕೈಕ ಮಹಾನಾಯಕ, ಅನುಪಮ ಮತ್ತು ಅಪೂರ್ವ ನಾಯಕನಿಗೆ ಸೃಷ್ಟಿಸಿರುವ ಅಗಣಿತ ಪ್ರತಿಮಾ ಸ್ಮಾರಕಗಳೆಂದು ಗೇಲ್ ಅಮ್‌ವೆಡ್ತ್ ಅವರು ಅಭಿಪ್ರಾಯ ಪಟ್ಟಿರುತ್ತಾರೆ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಕೈಯಲ್ಲಿ ಭಾರತೀಯ ಸಂವಿಧಾನ ಕೊಟ್ಟಿರುವುದು ಅವರು ಕೇವಲ ಒಬ್ಬ ಅಸ್ಪೃಶ್ಯರ ನಾಯಕರಷ್ಟೇ ಅಲ್ಲ, ಜಾತಿ ವ್ಯವಸ್ಥೆಯ ತುಳಿತಕ್ಕೊಳಗಾದ ಎಲ್ಲ ಶೋಷಿತ ಜನಾಂಗಗಳ ಜನಜಾಗೃತಿಯ ಅಖಂಡ ಮಹಾನಾಯಕರು ಎಂಬುದನ್ನು ಇದು ಸಾದರಪಡಿಸುತ್ತದೆ.

ಇಂದಿನ ಸಮಕಾಲಿನ ಸಂದರ್ಭದಲ್ಲಿ ಬಾಬಾಸಾಹೇಬ್ ಡಾ.ಅಂಬೇಡ್ಕರ್ ಅವರು ಭಾರತ ದೇಶವನ್ನೂ ಮೀರಿ ಬೆಳೆದಿದ್ದಾರೆ ಮತ್ತು ಬೆಳೆಯುತ್ತಿದ್ದಾರೆ. ಅಂಬೇಡ್ಕರ್ ಅವರ ಜ್ಞಾನದರ್ಶನದಿಂದ ರೂಪಿತವಾಗಿರುವ ಸಮಷ್ಠಿ ವಿಚಾರಧಾರೆಗಳು ಜಗತ್ತಿನಲ್ಲೆಡೆ ಪ್ರಸರಿಸುತ್ತಿವೆ. ಅವರು ಓದಿ ಉನ್ನತ ಪದವಿಗಳನ್ನು ಪಡೆದಕೊಂಡಿರುವಂಥ ಪ್ರಖ್ಯಾತಿಯ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಅಭಿಮಾನ ಪೂರ್ವಕವಾಗಿ ಅವರ ಪುತ್ಥಳಿಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ಕೂಡ ಪ್ರತಿಷ್ಠಾಪಿಸಲಾಗಿದೆ. ಅಂಬೇಡ್ಕರ್ ಅವರು ಸಂದರ್ಶಿಸಿದ ಗ್ರಂಥಾಲಯಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅವರ ಕುರಿತ ಮಾಹಿತಿಯನ್ನು ಇಡಲಾಗಿದೆ ಮತ್ತು ಮತ್ತಷ್ಟು ಇಡಲಾಗುತ್ತಿದೆ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆಯ ಹಿರಿಮೆ–ಗರಿಮೆಗಳು ಕೂಡ ಇಂದು ಆಫ್ರಿಕನ್ ಮತ್ತು ಅಮೇರಿಕನ್‌ರ ಮನಸ್ಸು ಸೂರೆಗೊಳ್ಳಲಾರಂಭಿಸಿವೆ. ಇಂದು ಆಫ್ರಿಕಾದ ಕರಿಯರಷ್ಟೇ ಅಲ್ಲ, ಜನಾಂಗೀಯ ದಬ್ಬಾಳಿಕೆಗೆ

ಒಳಗಾದ ಎಲ್ಲ ಜನಪದರ ಗುಂಪುಗಳು ಜಪಾನಿನ ಮಾಜಿ ಅಸ್ಪೃಶ್ಯರಾಗಿರುವ ಬುರಾಕಮಿನ್, ಏಶಿಯನ್ ಸಮಾಜದಲ್ಲಿಯ ಬೌದ್ಧರಂಥ'ವರೆಲ್ಲರೂ ಸಹ ತಮ್ಮ ತಮ್ಮ ಪಾಂಪರಿಕ ಧರ್ಮದ ಚೌಕಟ್ಟಿನೊಳಗೆ ಒಂದು ವಿಮೋಚನಾ ಧ್ವನಿಯ ಧರ್ಮಶಾಸ್ತ್ರವನ್ನು ರೂಪಿಸಿಕೊಳ್ಳುವ ಹವಣಿಕೆಯಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಕಡೆಗೆ ನೋಡುತ್ತಿದ್ದಾರೆ. ಹೀಗಾಗಿ ಕೇವಲ ಭಾರತ ದೇಶದಲ್ಲಿ ಅಷ್ಟೇ ಅಲ್ಲ ಜಗತ್ತಿನ ಶೋಷಿತ ಜನವರ್ಗಗಳಿಗೆಲ್ಲ ಅಂಬೇಡ್ಕರ್ ಅವರ ಜ್ಞಾನದರ್ಶನದ ಅಖಂಡ ವಿಚಾರಧಾರೆಗಳು ಹೆಚ್ಚು ಹೆಚ್ಚು ಬೆಳಕನ್ನು ಚೆಲ್ಲುವ ಮೂಲಕ ಪ್ರಕಾಶಿಸುತ್ತಿದೆ.

ಆಧುನಿಕ ಜಗತ್ತಿನಲ್ಲಿ ಅನೇಕ ಅಗ್ರಮಾನ್ಯರು, ಸಮಾಜ ಸುಧಾರಕರು, ಚಿಂತಕರು, ಮುತ್ಸದ್ಧಿಗಳು, ಮಾನವಪರ ಮತ್ತು ಜೀವಪರ ತತ್ತ್ವಜ್ಞಾನಿಗಳು ಬಂದು ಹೋಗಿದ್ದಾರೆ. ಅವರು ತಮ್ಮ ತಮ್ಮ ಕಾಲಾವಧಿಯಲ್ಲಿ ಇದ್ದಂಥ ಪರಿಸ್ಥಿತಿ ಮತ್ತು ಸಮಸ್ಯೆಗಳಿಗೆ ಪರಿಹಾರವನ್ನು ನೀಡಿ ಸಕಾರಾತ್ಮಕವಾಗಿಯೇ ಸಂಧಿದ್ದಾರೆ. ಆದರೆ, ಭಾರತೀಯ ಭೂಮಿಯಲ್ಲಿ ಜನಿಸಿದ್ದಂಥ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ತಾವು ಬದುಕಿದ್ದ ಕಾಲಘಟ್ಟ ಮತ್ತು ಇವತ್ತಿಗೂ ಎಂದೆಂದಿಗೂ ಚಾಲ್ತಿಯಲ್ಲಿ ಸಮಾಜ ಪರಿವರ್ತನೆಯ ಚಿಂತನಾ ದರ್ಶಶದ ಧಾರೆಗಳ ಪರ್ವವನ್ನೇ ಕೊಟ್ಟವರು. ಮತ್ತೇ ಈ ಸಮಕಾಲೀನ ಸಂದರ್ಭದಲ್ಲಿ ಪ್ರತಿ ನಿಮಿಷದಲ್ಲಿಯೂ ಒಂದಲ್ಲ ಒಂದು ವಿಷಯದಲ್ಲಿ ಅಂಬೇಡ್ಕರ್ ಮತ್ತು ಅವರ ಸರ್ವಕಾಲಿಕ ವಿಚಾರಗಳು ಪ್ರತಿಧ್ವನಿಸುತ್ತಿರುವುದನ್ನು ಜಾಗತಿಕವಾಗಿಯೂ ಕೂಡ ಗುರುತಿಸಬಹುದು ಮತ್ತು ಅವುಗಳು ವಿಮೋಚನಾ ಧ್ವನಿ ನಿರ್ಮಾಣದ ಹಾದಿಗಳೇ ಆಗಿರುತ್ತವೆ ಎಂಬುದು ತೆರೆದ ಸತ್ಯದ ಸಂಗತಿಯಾಗಿದೆ.

ಭಾರತದ ವೈದಿಕ ಸಾಮಾಜಿಕ ಚರಿತ್ರೆಯಲ್ಲಿ ಶೋಷಿತ ಸಮುದಾಯಗಳು ಗುಲಾಮ ಹಾಗೂ ಅಸ್ಪೃಶ್ಯ ಸಮಾಜವಾಗಿ ಸಾವಿರಾರು ವರ್ಷಗಳಿಂದ ಬದುಕುತ್ತಿದ್ದವು. ಅಂಬೇಡ್ಕರ್ ಅವರು ದಮನಿತ ಜನವರ್ಗಗಳನ್ನು ಪ್ರತಿಯೊಂದು ರಂಗದಲ್ಲಿಯೂ ಮುಖ್ಯವಾಹಿನಿಗೆ ತರಲು ತುಡಿದವರು. ಬ್ರಿಟಿಷರು ಹಾಗೂ ಭಾರತೀಯ ಪುರೋಹಿತಶಾಹಿ ವರ್ಗಗಳು ವಿಶ್ವದ ಎರಡು ಬಲಿಷ್ಠ ಶಕ್ತಿಗಳಾಗಿದ್ದವು. ಆ ಕಾರಣವಾಗಿಯೇ ಈ ಶಕ್ತಿಗಳ ವಿರುದ್ಧ ಬಹುದೊಡ್ಡ ಸಮರವನ್ನು ಸಾರಿ ಒಂದು ಪ್ರತಿಭಟನಾ ಶಕ್ತಿಯಾಗಿ ಹೊರಹೊಮ್ಮಿದರು.

ಭಾರತದಲ್ಲಿನ ಅಸ್ಪೃಶ್ಯ ಶೋಷಿತ ಜನಸಮುದಾಯಗಳಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ದೃಷ್ಟಿಯಿಂದ ತಮ್ಮ ಜ್ಞಾನಶಕ್ತಿಯನ್ನು ಪ್ರದರ್ಶಿಸಿ, ಅವರನ್ನು ರಾಜಕೀಯವಾಗಿ ಜಾಗೃತರನ್ನಾಗಿಸಿದ ಕೀರ್ತಿ ಮತ್ತು ಶ್ರೇಯಸ್ಸು ಅಂಬೇಡ್ಕರ್ ಅವರದು. ಅಂಬೇಡ್ಕರ್ ಅವರು ಅಸ್ಪೃಶ್ಯ ಜನಾಂಗದ ನಾಯಕರಷ್ಟೇ ಆಗಿರದೇ, ಹಿಂದುಳಿದ ಜಾತಿಗಳು, ಮಹಿಳೆಯರು, ಅಲ್ಪಸಂಖ್ಯಾತರು, ಕಾರ್ಮಿಕರು ಹಾಗೂ ಜಗತ್ತಿನ ಇಡೀ ಶೋಷಿತ ಸಮುದಾಯಗಳ ಜನಜಾಗೃತಿಯ ಸಂಕೇತ ಹಾಗೂ ಅವುಗಳ ಶಕ್ತಿಯಾಗಿದ್ದರು. ಈ ಮುಖೇನ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಆರ್ಥಿಕ

ಕ್ಷೇತ್ರಗಳಲ್ಲಿ ***'ಒಬ್ಬ ವ್ಯಕ್ತಿ, ಒಂದೇ ಮೌಲ್ಯ'*** ಎಂಬ ತತ್ವವನ್ನು ಕಾರ್ಯರೂಪಕ್ಕೆ ತರುವಂತೆ ಬ್ರಿಟಿಷರ ಮುಂದೆ ಪ್ರಜಾಸತ್ತಾತ್ಮವಾಗಿ ಹೋರಾಟವನ್ನು ಮಾಡಿದವರು.

ಬ್ರಿಟಿಷರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದು ನೆಲಸಿದರು. ಇವರು ಕಾಲಕಳೆದಂತೆ ಇಲ್ಲಿನ ಆಂತರೀಕ ವಿಚಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ಮೂಲಕ ಅದನ್ನೇ ಬಂಡವಾಳವಾಗಿ ಮಾಡಿಕೊಂಡು ತಮ್ಮ ಪ್ರಭುತ್ವವನ್ನು ಸ್ಥಾಪಿಸಲು ಯೋಜಿಸಿದರು. ಆ ಕಾಲದಲ್ಲಿ ಒದಗಿಬಂದಂತಹ ಸದಾವಕಾಶಗಳು ಹಾಗೂ ಸಮಯ ಸಂದರ್ಭಗಳನ್ನು ಬಹುಜಾಣ್ಮೆಯಿಂದ ಬಳಸಿಕೊಂಡು ಇಡೀ ರಾಷ್ಟ್ರವನ್ನೇ ತಮ್ಮ ಆಳ್ವಿಕೆಗೆ ವಶಪಡಿಸಿಕೊಂಡರು. ಹಾಗಾಗಿ, ಬ್ರಿಟಿಷರು ವ್ಯಾಪಾರದ ಜೊತೆ ಜೊತೆಗೆ ರಾಜ್ಯಾಧಿಕಾರವನ್ನು ಗಳಿಸಿಕೊಂಡರು. ಪ್ರಾರಂಭದಲ್ಲಿ ಅಲ್ಲಿನ ವ್ಯವಹಾರವನ್ನು ಮಾತ್ರ ನಿರ್ವಹಿಸುತ್ತಿದ್ದಂತಹ "ಈಸ್ಟ್ ಇಂಡಿಯ ಕಂಪನಿ"ಯೂ ವ್ಯವಸ್ಥಿತವಾಗಿ ಆಡಳಿತವನ್ನು ನಿರ್ವಹಿಸಿರುತ್ತದೆ. ಈ ನಿಟ್ಟಿನಲ್ಲಿ ಬ್ರಿಟಿಷ್ ಸಂಸತ್ತು ಕಾಲಕಾಲಕ್ಕೆ ಅವಶ್ಯಕವೆನಿಸಿದ ನೀತಿ–ನಿರ್ದೇಶನಗಳನ್ನು ಕಾಯಿದೆ ಹಾಗೂ ಕಾನೂನುಗಳ ರೂಪದಲ್ಲಿ ನೀಡುವುದರ ಮೂಲಕ ದೇಶದ ಒಡೆತನವನ್ನು ಸಂಪೂರ್ಣವಾಗಿ ತಮ್ಮ ಅಧೀನಕ್ಕೆ ತೆಗೆದುಕೊಂಡು ಬ್ರಿಟಿಷ್ ಭಾರತದಲ್ಲಿ ಆಡಳಿತವನ್ನು ನಡೆಸಿರುತ್ತದೆ. ಇಂತಹ ಕಾಲಸಂದರ್ಭದಲ್ಲಿ ಬ್ರಿಟಿಷರ ಆಡಳಿತಕ್ಕೆ ಪರೋಕ್ಷವಾಗಿ ವಿರೋಧಿ ಭಾವನೆ ಬೆಳೆಯತೊಡಗಿತು. ಈ ತೆರೆನಾಗಿರುವ ಭಾವನೆಯನ್ನು ಹತ್ತಿಕ್ಕಿ ಜನತಂತ್ರಗೊಳಿಸಲು ಒಲ್ಲದ ಮನಸ್ಸಿನಿಂದ ಆರಂಭಿಕ ಹೆಜ್ಜೆಗಳನ್ನು ಇಡಲು ಬ್ರಿಟಿಷ್ ಸರ್ಕಾರ ಪ್ರಾರಂಭಿಸಿತು. ಅದಕ್ಕಾಗಿಯೇ, ಮತದಾನ ಹಾಗೂ ರಾಜಕೀಯ ಪ್ರಾತಿನಿಧ್ಯದ ಅಧ್ಯಯನಕ್ಕಾಗಿ ಸೌತ್ ಬರೋ ಸಮಿತಿ, ಮುದ್ದಿಮಾನ್ ಸಮಿತಿ, ಸೈಮನ್ ಆಯೋಗ, ಲೂಥಿಯನ್ ಸಮಿತಿಗಳನ್ನು ರಚಿಸಿತ್ತು ಹಾಗೂ ದುಂಡುಮೇಜಿನ ಸಮ್ಮೇಳನಗಳನ್ನು ಆಯೋಜಿಸಲಾಗಿತ್ತು. ಬ್ರಿಟಿಷ್ ಸರ್ಕಾರವು ಸೌತ್‌ಬರೋ ಅವರ ಮುಖಂಡತ್ವದಲ್ಲಿ ***'ಮತ'*** ಹಾಕುವ ಹಕ್ಕಿನ ಬಗೆಗೆ ಒಂದು ಸಮಿತಿಯನ್ನು 1918ರಲ್ಲಿ ರಚಿಸಿ ಭಾರತಕ್ಕೆ ಕಳುಹಿಸಿದರು. ಇದರ ಮುಂದೆ ಅಂಬೇಡ್ಕರ್ ಅವರು 1919ನೇ ಜನವರಿ 27 ರಂದು ***ಪೌರತ್ವದ ಹಕ್ಕುಗಳು ಅಥವಾ ಮಾನವ ಹಕ್ಕುಗಳ*** ಬಗೆಗೆ ನಿವೇದಿಸುತ್ತಾ; ಅವುಗಳೆಂದರೆ; ವೈಯಕ್ತಿಕ ಸ್ವಾತಂತ್ರ್ಯ, ವೈಯಕ್ತಿಕ ರಕ್ಷಣೆ ಅಥವಾ ಭದ್ರತೆ ಖಾಸಗೀ ಆಸ್ತಿಯ ಹಕ್ಕು, ಕಾನೂನಿನಲ್ಲಿ ಸಮಾನತೆ, ಆತ್ಮಸಾಕ್ಷಿಯ ಸ್ವಾತಂತ್ರ್ಯ, ಅಭಿಪ್ರಾಯ ಮತ್ತು ವಾಕ್ ಸ್ವಾತಂತ್ರ್ಯ, ಒಂದು ಕಡೆ ಸಭೆ ಸೇರುವ ಸ್ವಾತಂತ್ರ್ಯ, ದೇಶದ ಸರ್ಕಾರದಲ್ಲಿ ಪ್ರಾತಿನಿಧ್ಯದ ಹಕ್ಕು ಹಾಗೂ ರಾಜ್ಯಾಧಿಕಾರದಲ್ಲಿ ಸ್ಥಾನವನ್ನು ಹೊಂದುವ ಹಕ್ಕುಗಳಿಂದ ಅಸ್ಪೃಶ್ಯರನ್ನು ಹೊರ ಹಾಕುಲಾಗಿರುತ್ತದೆ ಎಂಬ ಪ್ರಾಮಾಣೀಕ್ ಸಾಕ್ಷ್ಯಗಳನ್ನು ಒದಗಿಸಿದರು. ಹೀಗೆ, ಸಾಕ್ಷ್ಯಗಳ ಮೂಲಕ ಅಂಬೇಡ್ಕರ್ ಅವರು ಹಾಜರಾಗಿ ಬ್ರಿಟಿಷ್ ಪ್ರಭುತ್ವಕ್ಕೆ ಮನವರಿಕೆ ಮಾಡಿಕೊಟ್ಟವರು.

ಹಾಗೆಯೇ, 1919ರ ಕಾಯಿದೆಯ ಅನುಷ್ಠಾನದ ಅನಂತರ ಭಾರತದ ರಾಜಕೀಯ ಪರಿಸ್ಥಿತಿಯನ್ನು ಅರಿಯಲು 1927ನೇ ನವೆಂಬರ್ 8 ರಂದು ಬ್ರಿಟಿಷ ಸರ್ಕಾವು ಜಾನ್ ಸೈಮನ್

ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಿರುತ್ತದೆ. ಈ ಆಯೋಗವು ಮುಂಬಾಯಿಗೆ ಪ್ರಪ್ರಥಮವಾಗಿ 1928ನೇ ಫೆಬ್ರವರಿ 3 ರಂದು ಬಂದಾಗ ದೇಶದಾದ್ಯಂತ ವಿರೋಧ ಉಂಟಾಗಿ ಭಾರತೀಯರಿಂದ ತಿರಸ್ಕಾರಕ್ಕೆ ಗುರಿಯಾಗುತ್ತದೆ. ಆದರೆ, ಅಂಬೇಡ್ಕರ್ ಅವರು ನಿಮ್ನವರ್ಗದವರಗೆ ಪ್ರತ್ಯೇಕ ರಾಜಕೀಯ ಮತಕ್ಷೇತ್ರಗಳನ್ನು ಕುರಿತಂತೆ ***ಬಹಿಷ್ಕೃತ ಹಿತಕಾರಿಣಿ ಸಭಾದ*** ಪರವಾಗಿ ಒಂದು ಮನವಿ ಪತ್ರವನ್ನು ಸಲ್ಲಿಸಿ ಚರ್ಚಿಸಿದರು.

ಸೈಮನ್ ಆಯೋಗವು ವಿಫಲವಾಗಿರುವ ಕಾರಣ ಮತ್ತು ಪರಿಣಾಮದಿಂದಾಗಿ ಬ್ರಿಟಿಷ್ ಪ್ರಭುತ್ವವು ಮೂರು ದುಂಡುಮೇಜಿನ ಸಮ್ಮೇಳನಗಳನ್ನು ಆಯೋಜಿಸಿರುತ್ತದೆ. ಅವುಗಳೆಂದರೆ; **ಪ್ರಥಮ ದುಂಡುಮೇಜಿನ ಸಮ್ಮೇಳನವು** (1930ನೇ ನವೆಂಬರ್ 12 ರಿಂದ 1931ನೇ ಜನವರಿ 19 ರವರೆಗೆ), **ಎರಡನೇ ದುಂಡುಮೇಜಿನ ಸಮ್ಮೇಳನವು** (1931ನೇ ಸೆಪ್ಟೆಂಬರ್ 07 ರಿಂದ 1931 ಡಿಸೆಂಬರ್ 01 ರವರೆಗೆ) ಮತ್ತು **ಮೂರನೇ ದುಂಡುಮೇಜಿನ ಸಮ್ಮೇಳನವು** (1932ನೇ ನವೆಂಬರ್ 17ರಿಂದ 1932 ಡಿಸೆಂಬರ್ 24 ರವರೆಗೆ) ನಡೆದಿರುತ್ತದೆ. ಈ ಮೂರು ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುವ ಅಂಬೇಡ್ಕರ್ ಅವರು ಶೋಷಿತರ ಬದುಕಿಗೆ ಒಂದು ಹೊಸ ಚರಿತ್ರೆಯನ್ನು ಬರೆದವರು.

ದುಂಡುಮೇಜಿನ ಸಮ್ಮೇಳನವು ಬ್ರಿಟಿಷ್ ಸಂಸತ್ತಿನಲ್ಲಿ "ಭಾರತೀಯ ರಾಜ್ಯ ಕಾರ್ಯದರ್ಶಿಯಾಗಿದ್ದ ಲಾರ್ಡ್ ಮಾರ್ಕ್ವಿಸ್ ಲೂಥಿಯನ್ ಅವರ ನೇತೃತ್ವದಲ್ಲಿ 1931ನೇ ಡಿಸೆಂಬರ್ 29 ರಂದು ***'ಭಾರತೀಯ ಮತದಾನ ಹಕ್ಕಿನ ಸಮಿತಿ'***ಯನ್ನು ನೇಮಕ ಮಾಡಿತು". ಈ ಸಮಿತಿಯು ಭಾರತದಲ್ಲಿನ ಸುಧಾರಿತ ಶಾಸನಸಭೆಗಳಿಗೆ ಮತದಾನದ ಹಕ್ಕನ್ನು ಕುರಿತು ಅಧ್ಯಯನ ಮಾಡಲು ಭಾರತಕ್ಕೆ ಬಂದಿರುವಾಗ, ಮೂಲಭೂತವಾದಿಗಳು ಇದರ ಕಾರ್ಯಚರಣೆಯನ್ನು ಧಿಕ್ಕರಿಸುವ ಮನೋಭಾವ ತಾಳಿರುವುದರು. ಆದರೆ, ಅಂಬೇಡ್ಕರ್ ಅವರು ಈ ಸಮಿತಿಯಲ್ಲಿ ಸದಸ್ಯರಾಗಿ ಇಂಥ ಹಲವು ಹತ್ತು ವಿಷಯಗಳನ್ನು ಪ್ರಖರವಾಗಿಯೇ ವಿರೋಧಿಸಿ, ಒಂದು ಟಿಪ್ಪಣಿಯನ್ನು ತಯಾರಿಸಿ "1932ನೇ ಮೇ 01 ರಂದು ನಿಮ್ನವರ್ಗಗಳ ಪರವಾಗಿ ಈ ಸಮಿತಿಗೆ ಸಲ್ಲಿಸಿರುತ್ತಾರೆ." ಏಕೆಂದರೆ, ಸಾಮಾಜಿಕ ಹೋರಾಟದಿಂದ ಸಮಾನತೆ ದೊರಕುವುದು ಕಷ್ಟ ಸಾಧ್ಯವಾದಗ, ಅದನ್ನು ನಿಲ್ಲಿಸಿ, ರಾಜಕೀಯವಾಗಿ ಹೋರಾಟವನ್ನು ಪ್ರಾರಂಭಿಸಿದರು. ರಾಜಕೀಯ ಅಧಿಕಾರವನ್ನು ಪಡೆದುಕೊಂಡರೆ ಮಾತ್ರ, ಅಸ್ಪೃಶ್ಯರಿಗೆ ತಾನಾಗಿಯೇ ಸಾಮಾಜಿಕ ಹಾಗೂ ಆರ್ಥಿಕ ಅಧಿಕಾರವು ಬರುತ್ತದೆ ಎಂಬ ನಿಲುವಿನಿಂದ ಅಂಬೇಡ್ಕರ್ ಅವರು ರಾಜಕೀಯ ಅಧಿಕಾರಕ್ಕೆ 'ಮತದಾನದ ಹಕ್ಕು' ಬೇಕಾಗಿರುತ್ತದೆ, ಇದು ಒಬ್ಬ ಮನುಷ್ಯನಿಗೆ ಹೃದಯ ಮತ್ತು ಮೆದಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಎಂದು ಇದನ್ನು ಪಡೆದುಕೊಳ್ಳಲು ಬ್ರಿಟಿಷರ ಮುಂದೆ ಬಹುದೊಡ್ಡ ಹೋರಾಟ ಮಾಡಿ, ಆ ದಿಕ್ಕಿನಲ್ಲಿ ಸಾಗಿ ಯಶಸ್ಸು ಕಂಡಿರುವುದು ಅವರ ಸಾಧನೆಯ ಹಾದಿಯಾಗಿದೆ.

ದುಂಡುಮೇಜಿನ ಸಮ್ಮೇಳದಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿ ಅವರು ಮುಖಾ-ಮುಖಿಯಾಗಿ ತಮ್ಮ ತಮ್ಮ ನಿಲುವುಗಳಿಗೆ ಕಟಿಬದ್ಧರಾದ ಕಾರಣದಿಂದಾಗಿಯೇ, ಬ್ರಿಟಿಷರು ಮಧ್ಯಪ್ರವೇಶಿಸಿ 1932ನೇ ಆಗಸ್ಟ್ 17ರಂದು ಕೋಮುವಾರು ತೀರ್ಪನ್ನು ನೀಡಿತು. ಈ ತೀರ್ಪಿನಲ್ಲಿ ಅಸ್ಪೃಶ್ಯರಿಗೆ ನೀಡಿರುವ ಪ್ರತೇಕ ಚುನಾಯಿಕದ ವಿರುದ್ಧ ಗಾಂಧೀಜಿ ಅವರು ಯರವಾಡ ಕಾರಗೃಹದಲ್ಲಿ ಅಮರಣಾಂತರ ಉಪವಾಸ ಸತ್ಯಗ್ರಹ ಮಾಡಿದ್ದರು. ಇದರಿಂದಾಗಿ ***1932 ಸೆಪ್ಟೆಂಬರ್ 24ರಂದು ಸಂಜೆ 5.00 ಗಂಟೆ ಸುಮಾರಿಗೆ ಒಂದು ಒಪ್ಪಂದವಾಗುತ್ತದೆ ಅದೇ ದಲಿತರ ಕರಾಳ ಶಾಸನವಾದ ಪೂನಾ ಒಪ್ಪಂದ.***

ಅಂಬೇಡ್ಕರ್ ಮತ್ತು ಗಾಂಧೀ ನೇತೃತ್ವದ ಕಾಂಗ್ರೆಸ್ಸಿನ ನಡುವೆ ನಡೆದಿರುವ ಪೂನಾ ಒಪ್ಪಂದವು ಪ್ರಧಾನವಾಗಿ ಏಳು ಅಂಶಗಳಿಂದ ಕೂಡಿರುತ್ತದೆ. ಅವುಗಳೆಂದರೆ; ಪ್ರಾಂತೀಯ ಶಾಸನ ಸಭೆಗಳಲ್ಲಿ ಸಾಮಾನ್ಯ ಚುನಾವಣಾ ಕ್ಷೇತ್ರಗಳ ಪೈಕಿ ನಿಮ್ನವರ್ಗದವರಿಗೆ 148 ಸ್ಥಾನಗಳನ್ನು ಮೀಸಲಿಡಬೇಕು. (ಮದ್ರಾಸ್-30, ಮುಂಬಾಯಿ-15, ಪಂಜಾಬ್-8, ಬಿಹಾರ್ ಮತ್ತು ಒರಿಸ್ಸಾ-18, ಕೇಂದ್ರೀಯ ಪ್ರಾಂತ್ಯಗಳು-20, ಅಸ್ಸಾಂ-7, ಬಂಗಾಳ-30, ಸಂಯುಕ್ತ ಪ್ರಾಂತ್ಯಗಳು-20), ಸಾಮಾನ್ಯ ಚುನಾವಣಾ ಪಟ್ಟಿಯಲ್ಲಿ ನೋಂದಾಯಿಸಲ್ಪಟ್ಟಿರುವ ಎಲ್ಲಾ ನಿಮ್ನವರ್ಗದ ಸದಸ್ಯರು ಸೇರಿ ಒಂದು ಚುನಾವಣಾ ಸಮೂಹವಾಗುತ್ತದೆ. ಈ ಸಮೂಹವು 4 ಮಂದಿ ನಿಮ್ನವರ್ಗದ ಅಭ್ಯರ್ಥಿಗಳ ಸಮಿತಿಯನ್ನು ಏಕ ಮತದಾನದ ಮೂಲಕ ಪ್ರತಿ ಮೀಸಲು ಸ್ಥಾನಗಳಿಗೆ ಆಯ್ಕೆ ಮಾಡುತ್ತಾರೆ. ಇಂತಹ ಪ್ರಾಥಮಿಕ ಚುನಾವಣೆಯಲ್ಲೇ ಅತ್ಯಧಿಕ ಮತಗಳಿಸುವ ಈ 4 ಮಂದಿ ಅಭ್ಯರ್ಥಿಗಳೇ ಸಾಮಾನ್ಯ ಚುನಾಯಿತ ಅಭ್ಯರ್ಥಿಗಳಾಗಿರುತ್ತಾರೆ. ಕೇಂದ್ರ ಶಾಸನ ಸಭೆಗಳಲ್ಲೂ ಸಹ ನಿಮ್ನವರ್ಗದವರ ಪ್ರಾತಿನಿಧ್ಯವನ್ನು ವ್ಯಾಖ್ಯಾನ 2ರಲ್ಲಿ ಸೂಚಿಸಿರುವಂತೆ ಪ್ರಾಥಮಿಕ ಚುನಾವಣೆಯ ವಿಧಾನದಲ್ಲಿ ಜಂಟಿ ಚುನಾಯಿತ ಹಾಗೂ ಮೀಸಲು ಸ್ಥಾನಗಳ ನಿಯಮದಂತೆ ನೀಡಲಾಗುತ್ತದೆ. ಬ್ರಿಟಿಷ್ ಭಾರತದ ಕೇಂದ್ರ ಶಾಸನಸಭೆಯಲ್ಲಿ ಸಾಮಾನ್ಯ ಕ್ಷೇತ್ರಗಳ ಪೈಕಿ ಶೇಕಡಾ 18ರಷ್ಟು ಸ್ಥಾನಗಳನ್ನು ನಿಮ್ನವರ್ಗದವರಿಗಾಗಿ ಮೀಸಲಿಡಬೇಕು. ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಪ್ರಾಥಮಿಕ ಚುನಾವಣೆಯ ಮೂಲಕ ಅಭ್ಯರ್ಥಿಗಳ ಸಮಿತಿಯನ್ನು ಆಯ್ಕೆಮಾಡುವ ವಿಧಾನವು ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಮುಂಚಿತವಾಗಿ ರದ್ದು ಮಾಡದಿದ್ದಲ್ಲಿ ಹತ್ತು ವರ್ಷಗಳ ನಂತರ ರದ್ದಾಗುತ್ತದೆ. ಯಾವನೇ ಒಬ್ಬ ನಿಮ್ನವರ್ಗದ ಸದಸ್ಯನಿಗೆ ಆತನು ನಿಮ್ನವರ್ಗಕ್ಕೆ ಸೇರಿದವನು ಎಂಬ ಕಾರಣಕ್ಕಾಗಿ ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಚುನಾವಣೆಯಲ್ಲಾಗಲೀ, ಸಾರ್ವಜನಿಕ ನೌಕರಿಗಳಿಗೆ ನೇಮಕ ಮಾಡುವುದರಲ್ಲಾಗಲೀ ಯಾವುದೇ ಅಡ್ಡಿ ಆತಂಕಗಳು ಉಂಟಾಗಬಾರದು. ಪ್ರತಿಯೊಂದು ಪ್ರಾಂತ್ಯದಲ್ಲೂ ಶಿಕ್ಷಣಕ್ಕಾಗಿ ಮಂಜೂರು ಮಾಡುವ ಹಣದಲ್ಲಿ ಸೂಕ್ತವಾದ ಮೊತ್ತವನ್ನು ನಿಮ್ನ ವರ್ಗದ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮೀಸಲಿಡಬೇಕು. ಮುಂದೆ, ಅಂಬೇಡ್ಕರ್ ಅವರು ಮುಂಬಾಯಿಯ ಕಾರ್ಯಕಾರಿ ಮಂಡಳಿಯಲ್ಲಿ, ಸಂವಿಧಾನ ರಚನಾ ಸಭೆಯಲ್ಲಿ ಹಾಗೂ ಸ್ವಾತಂತ್ರ ಅನಂತರದ

ಸಂಸತ್ತಿನ ಒಳಗೆ ಮತ್ತು ಹೊರಗೆ ದಲಿತರ ರಾಜಕೀಯ ಹಕ್ಕು – ಅಧಿಕಾರಕ್ಕಾಗಿ ಬಹುದೊಡ್ಡ ಸಮರವನ್ನು ಸಾರಿರುತ್ತಾರೆ.

ಭಾರತದ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡಿದಾಗ ಈ ರಾಷ್ಟ್ರವನ್ನು ಪ್ರಮುಖವಾಗಿ ಎರಡು ಬಲಿಷ್ಠ ವ್ಯವಸ್ಥೆಗಳಾದ ಜಾತಿಹಿಂದೂಗಳು ಮತ್ತು ಬ್ರಿಟಿಷರು. ದೀರ್ಘಾವಧಿಯ ಆಳ್ವಿಕೆಯನ್ನು ಮಾಡಿರುವುದು ಕಂಡುಬಂದಿರುತ್ತದೆ. ಜಾತಿಮನಸ್ಸುಗಳು ಭಾರತದಲ್ಲಿ ಅಸ್ಪೃಶ್ಯರಿಗೆ, ಮಹಿಳೆಯರಿಗೆ ಹಾಗೂ ಹಿಂದುಳಿದ ಜಾತಿಗಳಿಗೆ ಶಿಕ್ಷಣದ ಬಾಗಿಲುಗಳನ್ನು ದೇವರು ಹಾಗೂ ಧರ್ಮದ ಹೆಸರಿನಲ್ಲಿ ಸಾವಿರಾರು ವರ್ಷಗಳಿಂದ ಮುಚ್ಚಿದ್ದವು. ಏಕೆಂದರೆ, ಸಂಸ್ಕೃತವನ್ನು ಯಾರು ಕಲಿಯಬಾರದು. ಅದನ್ನು ಕಲಿತವರಿಗೆ ದಂಡಿಸುವುದು, ಪಠಿಸಿದವರಿಗೆ ನಾಲಿಗೆ ಸೀಳುವುದು, ಕೇಳಿದವರ ಕಿವಿಗೆ ಸೀಸವನ್ನು ಕಾಯಿಸಿ ಹಾಕುವುದು. ಇದರಿಂದ ಈ ನೆಲದ ಮೂಲನಿವಾಸಿ ಬಹುಸಂಖ್ಯಾತ ಜನರನ್ನು ಶಿಕ್ಷಣದ ವಂಚನೆಗೆ ಒಳಪಡಿಸಿ, ಬೌದ್ಧಿಕ ದಬ್ಬಾಳಿಕೆಯನ್ನು ನಡೆಸಿದರು. ಜಾತಿಹಿಂದೂ ಸಮಾಜವೂ ಜ್ಞಾನದ ಸಂಪತ್ತನ್ನು ಏಕಸ್ವಾಮ್ಯದ ಒಡೆತನದಲ್ಲಿ ತನ್ನ ಬಳಿಯಲ್ಲಿಯೇ ಇರಿಸಿಕೊಳ್ಳಲು ಧರ್ಮವನ್ನು ಬಳಸಿ ಶೋಷಿತ ಸಮುದಾಯಗಳನ್ನು ಕಗ್ಗತ್ತಲ್ಲಿನಲ್ಲಿ ಇಟ್ಟಿದ್ದವು.

ಅಂಬೇಡ್ಕರ್ ಅವರು ಜೀವಿತದ ಅವಧಿಯಲ್ಲಿ ಹಲವು ಹತ್ತು ಹೋರಾಟಗಳನ್ನು, ಬರೆಹಗಳನ್ನು ಆ ಮೂಲಕ ಭಾರತೀಯ ಸಮಾಜಕ್ಕೆ ಕೊಡುಗೆಯಾಗಿಯೇ ಕೊಟ್ಟಿದ್ದಾರೆ. ಈ ನೆಲೆ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರ ಬದುಕು ದೇಶ ಮತ್ತು ವಿದೇಶಿ ಹೋರಾಟಗಾರರ ಮಾದರಿಯಲ್ಲಿ ಇರಲ್ಲಿಲ್ಲ. ಏಕೆಂದರೆ, ಅವರುಗಳ ಕುಟುಂಬದ ಹಿನ್ನೆಲೆ ಮತ್ತು ಬದುಕಿದ್ದಂಥ ಸ್ಥಳ, ಪರಿಸರವೇ ಬೇರೆಯೇ ಆಗಿತ್ತು. ಅಂಬೇಡ್ಕರ್ ಅವರದು ಇವರಿಗಿಂತಲೂ ಭಿನ್ನವಾಗಿತ್ತು. ಹೋರಾಟಗಳು, ಅವರು ಭಾರತೀಯ ರೋಗಗ್ರಸ್ಥ ಮನಸ್ಸುಗಳು ಮತ್ತು ಬ್ರಿಟಿಷರೊಟ್ಟಿಗೆ ಮುಖಾಮುಖಿಯಾಗಿ ಪ್ರತಿಭಟಿಸಲು ಮುಖವಾಣಿಗಳನ್ನು ಅಂದರೆ; ಪತ್ರಿಕೆಗಳನ್ನು ಹೊರತಂದಿರುವುದು ಒಂದು ಚಾರಿತ್ರಿಕ ಸಂಗತಿಯೇ ಆಗಿರುತ್ತದೆ. ಏಕೆಂದರೆ, ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಅನೇಕ ನಾಯಕರು ಮತ್ತು ಹೋರಾಟಗಾರರು ತಮ್ಮ ನೇತೃತ್ವದಲ್ಲಿ ತಮ್ಮ ವಿಚಾರಧಾರೆಗಳು ಹೊರಜಗತ್ತಿಗೆ ತಿಳಿಸುವ ಸಲುವಾಗಿಯೇ ಪತ್ರಿಕೆಗಳನ್ನು ಹೊರ ತಂದಿರುತ್ತಾರೆ. ಈ ಪತ್ರಿಕೆಗಳು ಪ್ರಧಾನವಾಗಿ ವೈದಿಕವಾದವನ್ನು ಮತ್ತು ದೇವರು, ಧರ್ಮ, ಸಂಪ್ರದಾಯ ಪ್ರೇಣಿತವೇ ಆಗಿದ್ದವು. ಇವುಗಳು ಯಾವು ಕೂಡ ಈ ನೆಲದ ಮೂಲನಿವಾಸಿಗಳು ಮತ್ತು ದಮನಿತರ ಬಿಡುಗಡೆಯ ವಿಮೋಚನಾ ಧ್ವನಿಗಳಾಗಿ ಹೊರಬರಲ್ಲಿಲ್ಲ.

ಅಂಬೇಡ್ಕರ್ ಅವರು ಮಾಡಿರುವ ಚಳವಳಿಯೂ ವೈಚಾರಿಕ ಮತ್ತು ವೈಜ್ಞಾನಿಕ ತಳಹದಿಯ ಆಧಾರಿತವಾಗಿದ್ದು, ಅವರ ವಿಚಾರಧಾರೆ ಮತ್ತು ಹೋರಾಟ ಎಷ್ಟೊಂದು ಪ್ರಖರವಾಗಿತ್ತೆಂದರೆ, ಅಂದಿನ ಪ್ರಶ್ನಾತೀತ ನಾಯಕರೆನಿಸಿದ್ದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಧಾನ ಸೇನಾನಿ ಎನ್ನಿಸಿಕೊಂಡಿದ್ದಂತಹ ಗಾಂಧೀಜಿ ಅವರು ಕೂಡ ಹೆಚ್ಚು ಹೆಚ್ಚು ವಿಚಲಿತರಾಗುತ್ತಿದ್ದರು. ಸಾವಿರಾರು

ವರ್ಷಗಳಿಂದ ಅಜ್ಞಾನ ಮತ್ತು ಅಂಧಕಾರದಲ್ಲಿ ಮುಳುಗಿ ಹೋಗಿದ್ದ ಜನಾಂಗವನ್ನು ಬಡಿದೆಬ್ಬಿಸಲು ಮತ್ತು ಅವರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸಲು ನಿರ್ಧರಿಸಿದಂಥ ಅಂಬೇಡ್ಕರ್ ಅವರು ತಮ್ಮ ಅಖಂಡ ಜ್ಞಾನದರ್ಶನದಲ್ಲಿ ಹುದುಗಿರುವಂಥ ಚಿಂತನೆಗಳನ್ನು ಬರವಣಿಗೆ ಮೂಲಕ ಜನಸಾಮಾನ್ಯರಿಗೆ ಪ್ರಸ್ತುತಪಡಿಸಬೇಕೆಂದು ಲೇಖನಗಳನ್ನು ಬರೆಯಲಾರಂಭಿಸಿದರು. ಅಸ್ಪೃಶ್ಯರು ಅನುಭವಿಸುತ್ತಿರುವ ಸಮಸ್ಯೆಗಳ ಬಗೆಗೆ ಲೇಖನ ಬರೆದು ಪತ್ರಿಕೆಗಳಿಗೆ ಕಳುಹಿಸಿಕೊಟ್ಟರೆ ಅಂದಿನ ಸಮಕಾಲೀನ ಯಾವ ಭಾರತೀಯ ಪತ್ರಿಕೆಗಳು ಪ್ರಕಟಿಸಲು ಮುಂದೆ ಬರಲಿಲ್ಲ. ಕೊನೆಗೆ ಗೋಡೆ ಮೇಲೆ ಬರಹಗಳನ್ನು ಬರೆಸುವುದರ ಮುಖಾಂತರ ಪತ್ರಿಕೆ ಪ್ರಾರಂಭಿಸಿದರು.

ಭೀಮರಾವ್ ರಾಮಜೀ ಅಂಬೇಡ್ಕರ್ ಅವರದು ಒಂದು ಅಗ್ರಮಾನ್ಯವೇ ಆಗಿರುವ ವ್ಯಕ್ತಿತ್ವವೇ ಆಗಿತ್ತು. ಅಸ್ಪೃಶ್ಯತೆಯ ದಳ್ಳುರಿಯಲ್ಲಿ ಬೆಂದು ಹೋದ ಅವರು ಪುಟಕ್ಕಿಟ್ಟ ಚಿನ್ನದಂತೆ ಪರಿವರ್ತನೆಗೊಂಡವರು. ಬಹುಶಃ ಜಗತ್ತಿನ ಸಾಮಾಜಿಕ ಪರಿವರ್ತನೆಯ ಇತಿಹಾಸದಲ್ಲಿ ಅಂಬೇಡ್ಕರ್ ಅವರು ಪಟ್ಟಂಥ ಕಷ್ಟವನ್ನು ಬೇರೆ ಯಾರೂ ಪಟ್ಟಿರಲಿಕ್ಕಿಲ್ಲ. ಅಂಬೇಡ್ಕರ್ ಅವರ ಶ್ರಮದ ಫಲವಾಗಿ ಹುಟ್ಟಿ ಬಂದದ್ದು ರಾಷ್ಟ್ರಮಟ್ಟದ ಸಾಮಾಜಿಕ ಚಳವಳಿ, ರಾಜಕೀಯ ಚಳವಳಿ, ಧಾರ್ಮಿಕ ಚಳವಳಿ ಮತ್ತು ಅವರ ಪ್ರತಿಯೊಂದು ಚಳವಳಿಗಳಿಗೆ ಬೆನ್ನೆಲುಬಾಗಿ ನಿಂತದ್ದು ಅವರೇ ಸ್ವತಃ ಹೊರಡಿಸಿದ ಪತ್ರಿಕೆಗಳು.

ಅಂಬೇಡ್ಕರ್ ಅವರು ಒಂದು ಸಮಾಜ ಪರಿವರ್ತನೆಯ ಚಳವಳಿಗೆ ಪತ್ರಿಕಾ ಮಾಧ್ಯಮದ ಅವಶ್ಯಕತೆಯಿದೆ ಎಂದು ತಿಳಿದು ಸ್ವಸಹಾಯ ಹಿನ್ನೆಲೆಯಲ್ಲಿ ಸ್ವಾವಲಂಬಿ ಪತ್ರಿಕೆಯನ್ನು ಹುಟ್ಟು ಹಾಕಿದರು. ಕೇವಲ ಸಾಮ್ರಾಜ್ಯಶಾಹಿ ಬ್ರಿಟಿಷರನ್ನೇ ಟೀಕಿಸುತ್ತಿದ ಪತ್ರಿಕೆಗಳಿಗೆ ಭಿನ್ನವಾಗಿ ಈ ದೇಶದಲ್ಲಿ ತಾಂಡವಾಡುತ್ತಿದ್ದ ಜಾತಿ ವ್ಯವಸ್ಥೆ, ಶೋಷಣೆ, ಬಡತನ, ಮೌಢ್ಯ, ಮೂಢನಂಬಿಕೆಗಳು, ಅನ್ಯಾಯಗಳನ್ನು ಮತ್ತು ಅಸಮಾನತೆಗಳನ್ನು ಸಮಾಜದ ಮುಂದಿಡುವುದರ ಮುಖಾಂತರ ಅವರ' ಪತ್ರಿಕೆ ಶೋಷಿತರ ಮುಖಾವಾಣಿಯಾಗಿ ಹೊರಹೊಮ್ಮಿತು. ಆ ಕಾರಣವಾಗಿಯೇ ಅಂಬೇಡ್ಕರ್ ಅವರು ಕಾಲಾನುಕ್ರಮದಲ್ಲಿ **ಮೂಕನಾಯಕ**ವನ್ನು 1920ನೇ ಜನವರಿ 31, **ಬಹಿಷ್ಕೃತ್ ಭಾರತ್**ಅನ್ನು 1927ನೇ ಏಪ್ರೀಲ್ 03, **ಸಮತಾ**ವನ್ನು 1928ನೇ ಜೂನ್ 29, **ಜನತಾವನ್ನು** 1930ನೇ ನವೆಂಬರ್ 24ರಂದು ಮತ್ತು **ಪ್ರಬುದ್ಧ ಭಾರತ್**ವನ್ನು 1956ನೇ ಫೆಬ್ರವರಿ 04ರಂದು ಹೀಗೆ ಐದು ಪತ್ರಿಕೆಗಳನ್ನು ಹೊರ ತಂದಿರುತ್ತಾರೆ. ಈ ಪತ್ರಿಕೆಗಳು ತಮ್ಮ ತಮ್ಮ ಕಾಲಾಮಾನದಲ್ಲಿ ಯಾವ ಮಾದರಿಯಲ್ಲಿ ಕಾರ್ಯಶೀಲ ಮತ್ತು ವಿಚಾರ ಶೀಲವಾಗಿದ್ದವು.

ಅಂಬೇಡ್ಕರ್ ಅವರು ಅಸ್ಪೃಶ್ಯರು, ಶೋಷಿತರ, ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಹೋರಾಟವನ್ನು ಪ್ರಾರಂಭಿಸಿದರು. ಅದಕ್ಕಾಗಿ ಹಲವು ಸಂಘ-ಸಂಸ್ಥೆಗಳನ್ನು ಹುಟ್ಟು ಹಾಕಿದರು. **ಅ**ಂಬೇಡ್ಕರ್ ಅವರು ಅಸ್ಪೃಶ್ಯರ, ಶೋಷಿತರ, ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಸಮಾಜ ಪರಿವರ್ತನಾ ಮತ್ತು ವಿಮೋಚನಾ ಹಾದಿಗಳನ್ನು ಸೃಷ್ಟಿಸಬಲ್ಲಂಥ ಪ್ರಧಾನ ಹೋರಾಟಗಳನ್ನು

ಪ್ರಾರಂಭಿಸಿದರು. ಅದಕ್ಕಾಗಿ ಹಲವು ಹತ್ತು ಸಂಘ–ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳನ್ನು ಹುಟ್ಟು ಹಾಕಿದರು. ಅವುಗಳನ್ನು ಈ ಕೆಳಗಿನಂತೆ ದಾಖಲಿಸಲಾಗಿದೆ. ಅವುಗಳೆಂದರೆ; ಬಹಿಷ್ಕೃತ ಹಿತಕಾರಿಣಿ ಸಭಾ – 1924, ನಿಮ್ನವರ್ಗಗಳ ಸಂಸ್ಥೆ – 1925, ಸಮತಾ ಸಮಾಜ ಸಂಘ – 1927, ಸ್ವತಂತ್ರ ಕಾರ್ಮಿಕ ಪಕ್ಷ – 1936, ಪುರಸಭೆ ಕಾರ್ಮಿಕರ ಸಂಘ– 1937, ಮಹಾರ್ ಪಂಚಾಯತ್ – 1940, ಮಹಾರ್ ಜ್ಞಾತಿ ಪಂಚಾಯತ್ ಸಮಿತಿ – 1941, ಸಮತಾ ಸೈನಿಕ ದಳ – 1944, ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ – 1942, ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಒಕ್ಕೂಟ – 1944, ಜನತಾ ಶಿಕ್ಷಣ ಸಂಸ್ಥೆ – 1944, ಭಾರತ ಭೂಷಣ ಮುದ್ರಣಾಲಯ – 1946, ಸಿದ್ಧಾರ್ಥ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು – 1946, ಸಿದ್ಧಾರ್ಥ ಕಾನೂನು ಮಹಾವಿದ್ಯಾಲಯ – 1946, ಮಿಲಿಂದ ಕಲಾ ಕಾಲೇಜು, ಔರಂಗಬಾದ್ – 1950, ಭಾರತೀಯ ಬುದ್ಧ ಜನಸಂಘ – 1951, ಸಿದ್ಧಾರ್ಥ ವಾಣಿಜ್ಯ ಮತ್ತು ಅರ್ಥಶಾಸ್ತ್ರ ಮಹಾವಿದ್ಯಾಲಯ– 1951, ಭಾರತೀಯ ಬೌದ್ಧ ಮಹಾಸಭಾ) – 1955, ಮುಂಬೈ ರಾಜ್ಯ ಮನೆ ಕೆಲಸಗಾರರ ಸಂಘ – 1955, ರಾಜಕೀಯ ತರಬೇತಿ ಶಾಲೆ – 1956 ಮತ್ತು ಭಾರತೀಯ ರಿಪಬ್ಲಿಕನ್ ಪಕ್ಷ – 1956. ಹೀಗೆ ಅಂಬೇಡ್ಕರ್ ಅವರು ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳನ್ನು ಸ್ಥಾಪಿಸಿ ಭಾರತೀಯ ನೆಲದ ಮೂಲನಿವಾಸಿ ದಮನಿತರ ಧ್ವನಿಗೆ ಗಟ್ಟಿಧ್ವನಿಯಾಗಿ ಕಾರ್ಯಚರಣೆಯನ್ನು ಮಾಡಿ ಆ ಮುಖೇನ ಪರಿವರ್ತನೆಯ ಹಾದಿಗಳನ್ನು ಈ ಸಮಾಜಗಳಲ್ಲಿ ಸೃಷ್ಟಿ ಮಾಡಿದವರು.

ಅಂಬೇಡ್ಕರ್ ಅವರು ವಿದ್ಯಾರ್ಥಿದೆಸೆಯಿಂದಲೆ ಓದುವ ಮತ್ತು ಬರೆಯುವ ಅಭ್ಯಾಸವನ್ನು ಮಾಡಿದ್ದರು. ಅದು ಎಷ್ಟರ ಮಟ್ಟಿಗೆ ಎಂದರೆ, ಅಮೇರಿಕಾ ದೇಶದಲ್ಲಿ ವ್ಯಾಸಾಂಗ ಮಾಡುವಾಗ ದಿನದ ಸರಿಸುಮಾರು 18 ಘಂಟೆಗಳು, ಮತ್ತೇ ಲಂಡನ್‌ನ ಅರ್ಥಶಾಸ್ತ್ರೀಯ ಶಾಲೆಯಲ್ಲಿದ್ದಾಗ 22 ಘಂಟೆಗಳು ನಿರಂತರವಾಗಿ ಸಾಗುತ್ತಿತ್ತು. ಅಖಂಡ ಅಧ್ಯಯನದ ಪ್ರತಿಫಲವಾಗಿ ಈ ಭೂಮಂಡಲದಲ್ಲಿಯೇ ಯಾರು ಅಂಬೇಡ್ಕರ್ ಅವರನ್ನು ಸರಿಗಟ್ಟಲು ಸಾಧ್ಯವಾಗದಷ್ಟು ಅಧ್ಯಯನ ಮತ್ತು ಅವುಗಳ ಬಲದ ಮೇಲೆ ಬರೆಹಗಳನ್ನು ಬರೆದು ಬಿಟ್ಟು ಹೋಗಿದ್ದಾರೆ. ಅವುಗಳೆಲ್ಲವೂ ಕೂಡ ಆಧುನಿಕ ಭಾರತ ನಿರ್ಮಾಣದ ಚಿಂತನೆಗಳೇ ಆಗಿರುತ್ತವೆ. ಆದ್ದರಿಂದಲೇ ಅಂಬೇಡ್ಕರ್ ಅವರನ್ನು ಆಧುನಿಕ ಭಾರತದ ಅಗ್ರಮಾನ್ಯರು ಎಂದು ಕರೆಯಬಹುದು.

**ಪರಾಮರ್ಶನ ಕೃತಿಗಳು**

1. **ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟಗಳು –1 ರಿಂದ 22,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, 2015
2. **ದತ್ತಾತ್ರೇಯ ಇಕ್ಕಳಿಕಿ** (ಸಂ), ಅಂಬೇಡ್ಕರ್ ಚಿಂತನೆ, ಸುಮೇದನ ಪ್ರಕಾಶನ, ಗುಲ್ಬರ್ಗ, 2006
3. **ದತ್ತಾತ್ರೇಯ ಪೂಜಾರಿ, ಗೀತಾ ಪೂಜಾರಿ,** (ಸಂ) ಡಾ. ಬಿ.ಆರ್. ಅಂಬೇಡ್ಕರ್ ಅವರ ಬಹಿಷ್ಕೃತ ಭಾರತದಲ್ಲಿನ ಸ್ಫುಟ ಲೇಖನಗಳು, ಸಾಗರದೀಪ ಪ್ರಕಾಶನ, ಕಾರವಾರ, 1986
4. **ತುಕಾರಾಮ್.ಎಸ್**. ಲೋಕಶಿಕ್ಷಣ (ಗಾಂಧೀ, ಅಂಬೇಡ್ಕರ್ ಮತ್ತು ಫ್ರೆಯರೆಯವರ ತಾತ್ವಿಕ ನೆಲೆಗಟ್ಟಿನಲ್ಲಿ ಕರ್ನಾಟಕ ಸಾಕ್ಷರತಾ ಆಂದೋಲನ), ರೂಪ ಪ್ರಕಾಶ, ಮೈಸೂರು, 2012
5. **ಗೋಪಾಲ್.ಜಿ**. ನವಭಾರತ ನಿರ್ಮಾಪಕರು ಡಾ.ಬಿ.ಆರ್.ಅಂಬೇಡ್ಕರ್, ಸಮಕ್ಯ ಪ್ರಕಾಶನ, ಮೈಸೂರು, 2017
6. **ಜಾಕೋಬ್ ಲೋಬೋ.ಸಿ.ಎಚ್,** (ಅನು) **ಜಿ.ಎಸ್.ಲೋಖಂಡೆ** (ಮೂಲ), ಭೀಮರಾವ್ ರಾಮ್‌ಜೀ ಅಂಬೇಡ್ಕರ್ (ಸಾಮಾಜಿಕ ಪ್ರಜಾಪ್ರಭುತ್ವದ ಒಂದು ಅಧ್ಯಯನ), ಸಪ್ನಬುಕ್ ಹೌಸ್, ಬೆಂಗಳೂರು, 2009
7. **ಇನಾಂದರ್.ವಿ.ಎಂ,** ಅಂಬೇಡ್ಕರ್ ವ್ಯಕ್ತಿ ಮತ್ತು ವಿಚಾರ, ಉಷಾ ಸಾಹಿತ್ಯ ಮಾಲೆ, ಮೈಸೂರು, 1995
8. **ಜವರಯ್ಯ.ಮ.ನ,** ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, 1995
9. **ಜವರಯ್ಯ.ಮ.ನ,** ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಬೇಡ್ಕರ್, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, 2001
10. **ಮಂಗ್ಳೂರ ವಿಜಯ** (ಸಂಗ್ರಹ), ಸಂಘರ್ಷ – ಅಂಬೇಡ್ಕರ್ ಜೀವನ ಸಾಧನೆ, ಸಂಬುದ್ಧ ಪ್ರಕಾಶನ, ಬೆಂಗಳೂರು, 2002.